ಕತೆ



**ಆಶಾ ರಘು**

ಕಲೆ: ಸಂತೋಷ್ ಸಸಿಹಿತ್ಲು

# ಒಳಗುದಿ

ದಿನಕ್ಕೆ ಒಂದು ಸಲವಾದರೂ ಕಣ್ಣು ಬಿಟ್ಟು ನೋಡಿದರೆ ಈ ಜೀವಕ್ಕೆ ಏನೋ ಸಮಾಧಾನ..! ಸಾಧಾರಣವಾಗಿ ಕಿವಿಯ ಹತ್ತಿರಕ್ಕೆ ನಿಂತುಕೊಂಡು, 'ಬೇಗ ಚೇತರಿಸಿಕೋಬೇಕು ನೀವು... ಪುನೀತನ ಮುಂಜಿ ಇದೆ... ಊಂ?...' ಎಂದೇನಾದರೂ ಹೇಳಿದರೆ, ಮೆಲ್ಲನೆ ಕಣ್ಣು ಬಿಟ್ಟು ನೋಡೋರು! ಇಂದು ಯಾವ ಮಾತಾಡಿದರೂ ಇಲ್ಲ! ಇನ್ನೆಷ್ಟು ಕಾಲ ಇವರನ್ನು ಹೀಗೇ ನಳಿಕೆಗಳ ಅವಲಂಬನೆಯಲ್ಲಿ ಇರೋದನ್ನ ನೋಡಬೇಕೋ!?... ರಾತ್ರಿಗಳಲ್ಲಿ ನಿದ್ದೆಯೇ ಬರೋಲ್ಲ. ಅಪರೂಪಕ್ಕೆ ಒಂದೊಂದು ಸಲ ತೂಕಡಿಕೆ ಬಂದರೆ, ಹಾಳಾದ್ದು ಏನೇನೋ ಕನವರಿಕೆ.. ಕೆಟ್ಟಕೆಟ್ಟ ಅಸ್ಪಷ್ಟ ಕನಸುಗಳು... ನಂತರ ಯಾರೋ ಹೊಡೆದ ಹಾಗೆ ಬೆಚ್ಚಿ, ದಡ್ಡಂತ ಎಚ್ಚರಗೊಳ್ಳೋದು! ನಾನು ಆಸ್ಪತ್ರೆಯಲ್ಲೇ ಇವರನ್ನ ನೋಡಿಕೊಂಡು ರಾತ್ರಿ ಮಲಗುತ್ತೇನೆ ಅಂದರೆ ಮಕ್ಕಳು ಕೇಳೋಲ್ಲ. 'ಆಳು ಹುಡುಗ ಶಂಕರ ಮಲಗಿಕೊಳ್ತಾನೆ. ನೀನು ಬೆಳಗ್ಗೆ ಹೋಗಿ ರಾತ್ರಿವರೆಗೆ ಇದ್ದು, ಹಿಂದಿರುಗಿ ಮನೆಗೆ ಬಂದುಬಿಡು. ನಿನಗೂ ವಯಸ್ಸಾಗಿಲ್ಲವೇ ಅಮ್ಮ? ಮಾತ್ರೆ, ಔಷಧಿ ತೊಗೋಬೇಡವೇ? ರಾತ್ರಿ ಕಣ್ಣಿಗೆ ಸರಿಯಾದ ನಿದ್ದೆ ಬೇಡವೇ?' ಅಂತಾರೆ. ಇವರು ಇಲ್ಲಿ ಹೀಗೆ ಮಲಗಿರುವಾಗ, ನನಗೆ ಮನೇಲಿ ನೆಮ್ಮದಿಯಾಗಿ ಹ್ಯಾಗೆ ನಿದ್ದೆ ಮಾಡೋಕ್ಕೆ ಆಗುತ್ತೆ? ನನ್ನ ಒಳಗುದಿ ಯಾರಿಗೆ ಅರ್ಥವಾಗಬೇಕು?... ವಸುಂಧರಮ್ಮ ನಿಟ್ಟುಸಿರುಬಿಟ್ಟರು.

ಊಂ... ಶಂಕರ ಮಲಗಿಕೋತಾನೆ! ಶಂಕರ? ಆಳು ಹುಡುಗ?... ಯಾಕೆ ಇವರಿಗೆ ಮಲಗಿಕೊಳ್ಳೋಕ್ಕೆ ಆಗೋಲ್ಲವ? ಒಬ್ಬರಿಗೆ ಇಬ್ಬರಿದಾರೆ!? ಇಬ್ಬರಿಗೂ ಹೆಂಡತಿಯರೊಂದಿಗೆ ಮಲಗುವ ಸೌಖ್ಯ ಬೇಕು! ಇರಲಿ, ಬೆಳಗ್ಗೆ ಎದ್ದು ಕೆಲಸಕಾರ್ಯಗಳಿಗೆ ಹೋಗುವವರು! ಮಕ್ಕಳು ಮಾತ್ರವಲ್ಲ, ಸೊಸೆಯರೂ ಹೋಗುತ್ತಾರೆ! ಅಡುಗೆ, ಕಸಮುಸರೆ ಮಾಡಿಕೊಂಡು ಮನೇಲೇ ಇರುವಂತಹ ಹೆಣ್ಣುಗಳು ಬೇಡ ಅಂತ, ಕೆಲಸಕ್ಕೆ ಹೋಗುವಂತಹ ಹೆಣ್ಣುಗಳನ್ನೇ ನೋಡಿ ಆರಿಸಿ ತಂದುಕೊಂಡದ್ದು ನಾನೇ ಅಲ್ಲವೇ? ಅದಕ್ಕೇ ಮೊಮ್ಮಕ್ಕಳ ಸಮಕ್ಕೆ, ಮಕ್ಕಳೂ, ಸೊಸೆಯರೂ ಬೆಳಗಿನ ಜಾವ ಅಡುಗೆ ಮನೆಯಲ್ಲಿ ಸಾಲಾಗಿ ಊಟದ ಡಬ್ಬಿಗಳನ್ನು ಹಿಡಿದುಕೊಂಡು ನಿಂತುಬಿಡ್ತಾರೆ! ನಾನು ಬೇಯಿಸಿದ ಅಡುಗೆಯನ್ನು ಎಲ್ಲಾ ಡಬ್ಬಿಗಳಿಗೂ ತುಂಬಬೇಕು! ಇವರು ಅದೆಷ್ಟು ದಿನ ಸಿಡಿಮಿಡಿಗುಟ್ಟಿದ್ದಾರೆಯೋ ಅದಕ್ಕಾಗಿ! ಕೆಲವೊಮ್ಮೆ ಸಣ್ಣ ಜಗಳಗಳೂ ಆಗಿವೆ! ಈಗ, ಇವರು ಹೀಗೆ ಆಸ್ಪತ್ರೆಯಲ್ಲಿ ಇರೋ ಹೊತ್ತು ಕೂಡಾ, ನಾನು ಬೆಳಗಾಗಿ ಎದ್ದು, ಎಲ್ಲರ ಡಬ್ಬಿಗಳನ್ನೂ ತುಂಬಿಸಿಯೇ, ಆಮೇಲೆ ಸಿದ್ಧವಾಗಿ ಇಲ್ಲಿಗೆ ಹೊರಟುಬರಬೇಕು! ನನ್ನನ್ನು ರಾತ್ರಿ ವೇಳೆ ಆಸ್ಪತ್ರೆಯಲ್ಲಿ ಮಲಗಿಕೊಳ್ಳೋದು ಬೇಡ ಅಂತ ಮಕ್ಕಳು ಹೇಳುವುದಕ್ಕೆ ಈ ಕಾರಣವೂ ಇರಬಹುದೇ!..

ವಸುಂಧರಮ್ಮನಿಗೆ ಕೈಯಲ್ಲಿದ್ದ ಮೊಬೈಲ್ ಫೋನಿನ ಮೇಲೆ ಗಮನ ಹೋಯಿತು. ಆನ್ ಮಾಡಿ ಟೈಂ ನೋಡಿದರು.